# ‘ನಾನು ನಿಂತಲ್ಲೇ ಸರತಿ ಸಾಲು

## ಮೌನ
### ಕಲರ್ಸ್ ಕನ್ನಡದ ‘ರಾಮಾಚಾರಿ’ಯ ಚಾರುಲತಾ



◆ **ನಟನೆಯ ಆರಂಭ ಹೇಗಾಯಿತು?**

ಮೊದಲಿಗೆ ಮಾಡೆಲಿಂಗ್ ಆರಂಭ ಮಾಡಿದೆ. ಅದು ಆಕಸ್ಮಿಕವಾಗಿ ಎಂದೇ ಹೇಳಬೇಕು. ಆನಂತರ ನಮ್ಮ ಅಮ್ಮ ಅಭಿನಯದಲ್ಲಿ ತೊಡಗಲು ಹೇಳುತ್ತಿದ್ದರು. ಯಾವತ್ತಾದರೂ ಒಂದು ಅವಕಾಶ ಬಂದರೂ ಒಪ್ಪಲು ಹಿಂದೇಟು ಹಾಕುತ್ತಿದ್ದೆ. ಏಕೆಂದರೆ ನಾನು ಓದಿಗೆ ಆದ್ಯತೆ ನೀಡಬೇಕಿತ್ತು. ನನ್ನ ತಾಯಿಯ ಆಸೆಯನ್ನು ಪೂರೈಸಬೇಕು ಎಂಬ ದೃಷ್ಟಿಯಿಂದ ಒಂದು ಆಡಿಷನ್ ನೀಡಿದೆ. ಅದೂ ರಾಮ್‌ಜೀ ಪ್ರೊಡಕ್ಷನ್. ಮೊದಲ ಯತ್ನವೇ ಫಲಪ್ರದವಾಯಿತು. ಇದೆಲ್ಲ ಕನಸಿನಲ್ಲಿ ನಡೆದಷ್ಟು ಸಲೀಸಾಗಿ ನಡೆದು ಹೋಯಿತು. ಹಾಗೆ ನೋಡಿದರೆ ನಾನು ಅದೃಷ್ಟವಂತೆ ಎಂದೇ ಹೇಳಬೇಕು.

◆ **ಮೊದಲ ದಿನದ ಚಿತ್ರೀಕರಣ ಹೇಗಿತ್ತು?**

ಅಪ್ಪ–ಅಮ್ಮ ಇದ್ದರೂ ತುಂಬ ಭಯ ಆಗುತ್ತಿತ್ತು. ಅಭಿನಯದಲ್ಲಿ ಅನುಭವ ಇರಲಿಲ್ಲ. ಹೇಳಿದ್ದನ್ನು ಮಾಡುವುದು ಕಷ್ಟ ಆಗುತ್ತಿತ್ತು. ಎಲ್ಲರ ಪ್ರೋತ್ಸಾಹ ಭೀತಿಯ ವಾತಾವರಣದಿಂದ ಬೇಗ ಹೊರಬರಲು ಸಹಾಯ ಮಾಡಿತು. ಈಗ ನಮ್ಮ ಮನೆಯಲ್ಲಿಯೇ ಇದ್ದೇನೆ ಎನ್ನುವ ಭಾವನೆ ಬಂದಿದೆ. ಮೊದಲ ದಿನ ನಟನೆ ಕಷ್ಟ ಇತ್ತು. ತಂಡದಲ್ಲಿ ಮತ್ತೊಬ್ಬರನ್ನು ನೋಡಿ ಕಲಿತೆ. ಎಲ್ಲರೂ ಹೇಳಿಕೊಟ್ಟಿದ್ದರಿಂದ ಕಲಿತೆ. ಈಗ ಸುಲಭ ಎಂದು ಅನಿಸುತ್ತಿದೆ. ಡೈಲಾಗ್ ಹೇಳುವುದಾಗಲಿ ಭಾವನೆಯನ್ನು ವ್ಯಕ್ತಪಡಿಸುವುದಾಗಲಿ ತುಂಬ ಸುಧಾರಿಸಿಕೊಂಡಿದ್ದೇನೆ. ಮೊದಲು ಹೇಗೆ ವರ್ತಿಸಬೇಕು ಎನ್ನುವುದೂ ಗೊತ್ತಾಗುತ್ತಿರಲಿಲ್ಲ.

◆ **ರಾಮಾಚಾರಿಗೆ ಅಷ್ಟೊಂದು ಹಿಂಸೆ ಕೊಟ್ಟು ಖುಷಿಪಡ್ತೀರಲ್ಲ ನಿಮಗೆ ಏನು ಅನಿಸುವುದಿಲ್ಲವೆ?**

ಅವನಿಗೆ ಬುದ್ಧಿ ಕಲಿಸಬೇಕು ಎನ್ನುವ ಹಟ ನನ್ನದು. ಅದು ಏಕೆಂದರೆ ಅವನು ನನ್ನ ದಾರಿಗೆ ಅಡ್ಡ ಬಂದಿದ್ದಾನೆ. ನಾನು ನಡೆದಿದ್ದೇ ದಾರಿ ಎನ್ನುವ ಸ್ವಭಾವ ನನ್ನದು. ಅದಕ್ಕೆ ಅಡ್ಡಿಪಡಿಸಿದವರನ್ನು ನಾನು ಯಾವುದೇ ಕಾರಣಕ್ಕೂ ಬಿಡುವುದಿಲ್ಲ. ನಾನು ಬಯಸಿದ್ದೆಲ್ಲ ಸುಲಭವಾಗಿ ನನಗೆ ದಕ್ಕುತ್ತದೆ. ಯಾರಾದರೂ ಸರತಿ ಸಾಲಿನಲ್ಲಿ ನಿಂತು ಏನಾದರೂ ಪಡೆಯುವ ಪ್ರಸಂಗ ಬಂದರೆ, ನಾನು ನಿಂತಲ್ಲೇ ಸರತಿ ನಿರ್ಮಾಣ ಆಗುತ್ತದೆ. ನನಗೆ ಕಷ್ಟ ಎನ್ನುವುದೇ ಗೊತ್ತಿಲ್ಲ. ಎಲ್ಲ ಕ್ಷೇತ್ರದಲ್ಲಿಯೂ ನನಗೆ ಸ್ವಾತಂತ್ರ್ಯ ಸಿಗಬೇಕು. ಒಮ್ಮೆ ನಾನು ಪಾರ್ಟಿ ಮುಗಿಸಿಕೊಂಡು ಬರುವಾಗ ರಾಮಾಚಾರಿ ನನ್ನ ಕಾರನ್ನು ಹತ್ತಿ ಅವಮಾನ ಮಾಡಿದ್ದಾನೆ. ಅದೇ ಮೊದಲಬಾರಿಗೆ ಆತ ಮುಖಾಮುಖಿ ಆಗಿದ್ದ. ಅವನಿಗೆ ಪಾಠ ಕಲಿಸಬೇಕು ಎಂದು ನಾನು ಅಂದೇ ನಿರ್ಧರಿಸಿದ್ದೆ. ಈಗ ಅವನು ನಾನು ಹೋದಲೆಲ್ಲ ಸಿಗ್ತಿದ್ದಾನೆ. ಮನೆಗೂ ಬಂದಿದ್ದ. ನಮ್ಮ–ತಂದೆ ತಾಯಿಯ ವಿಷಯವನ್ನು ಎಲ್ಲರಿಗೂ ಹೇಳಿದ್ದಾನೆ. ಅದು ಇನ್ನೂ ಸಿಟ್ಟನ್ನು ತಂದಿದೆ. ಈಗ ನಾನು ಕೆಲಸ ಮಾಡುವ ಕಚೇರಿಗೂ ಬಂದಿದ್ದಾನೆ. ಅವನಿಗೆ ಬುದ್ಧಿ ಕಲಿಸಬೇಕು ಅಷ್ಟೇ ಎನ್ನುವುದು ಪಾತ್ರದ ಆಶಯ.

◆ **ನಿಮ್ಮ ಕುಟುಂಬದ ಹಿನ್ನೆಲೆಯನ್ನು ಹೇಳಿ.**

ನನ್ನ ತಂದೆ ಸೇನೆಯಲ್ಲಿ ಅಧಿಕಾರಿ ಆಗಿದ್ದರು. ಆರು ತಿಂಗಳ ಹಿಂದೆ ನಿವೃತ್ತಿ ಹೊಂದಿದ್ದಾರೆ. ಅವರ ಹೆಸರು ಭೋಜರಾಜ್, ಅಮ್ಮನ ಹೆಸರು ಕುಸುಮಾ. ನಾವು ಮೂಲತಃ ಕೊಡಗಿನವರು. ಈಗ ಮಂಗಳೂರಿನಲ್ಲೇ ನೆಲೆಸಿದ್ದೇವೆ. ಪೋಷಕರಿಬ್ಬರ ಪ್ರೋತ್ಸಾಹ ಸ್ಮರಣೀಯ. ಸಂಪ್ರದಾಯಸ್ಥ ಕುಟುಂಬ ನಮ್ಮದು. ಚಿಕ್ಕಂದಿನಲ್ಲಿ ಏರ್‌ಫೋರ್ಸ್‌ಗೆ ಸೇರಬೇಕು ಎನ್ನುವ ಆಸೆ ಇತ್ತು. ಆದರೆ ಅಪ್ಪನಿಗೆ ಅದು ಇಷ್ಟ ಇರಲಿಲ್ಲ. ಸ್ಪೋರ್ಟ್ಸ್, ಎನ್.ಸಿ.ಸಿ. ಸಕ್ರಿಯ ವಿದ್ಯಾರ್ಥಿಯಾಗಿದ್ದೆ. ಮಂಗಳೂರಿನಲ್ಲೇ ನಾನು ಓದಿದ್ದು, ರಜೆ ಸಮಯದಲ್ಲಿ ಅಪ್ಪ ಕೆಲಸ ಮಾಡುತ್ತಿದ್ದ ಊರಿಗೆ ನಾವು ಹೋಗುತ್ತಿದ್ದೆವು. ಹಾಗಾಗಿ ಹೈದರಾಬಾದ್, ಪೂನಾ, ಜಮ್ಮು ಕಾಶ್ಮೀರ, ದೆಹಲಿ ಹೀಗೆ ದೇಶವನ್ನು ಸುತ್ತಿದ್ದೇನೆ. ಪಿಯು ಓದುವಾಗ ‘ಮಿಸ್ ತುಳುನಾಡು’ ಸ್ಪರ್ಧೆಗೆ ಆಯ್ಕೆ ಆಗಿದ್ದೆ. ಅದು ನನ್ನನ್ನು ಮಾಡೆಲಿಂಗ್ ಲೋಕಕ್ಕೆ ಕರೆದುಕೊಂಡು ಹೋಯಿತು. ಅಲ್ಲಿಂದ ನನ್ನ ಜೀವನ ಕ್ರಮವೇ ಬದಲಾಯಿತು. ಈಗ ‘ರಾಮಾಚಾರಿ’ಯಿಂದ ನನ್ನ ವೃತ್ತಿ ಬದುಕಿಗೆ ದೊಡ್ಡ ತಿರುವು ಸಿಕ್ಕಿದೆ.

◆ **ಬೆಂಗಳೂರಿನ ಜೀವನ ಹೇಗಿದೆ?**

ಇಲ್ಲಿ ಈಗ ಸ್ವತಂತ್ರವಾಗಿದ್ದೇನೆ. ನಮ್ಮ ಕುಟುಂಬವನ್ನು ಬಿಟ್ಟಿರುವುದು ಇದೇ ಮೊದಲು. ಒಬ್ಬಳೇ ಪಿಜಿಯಲ್ಲಿ ಇದ್ದೇನೆ. ಕೆಲಸದಲ್ಲಿ ಹೆಚ್ಚು ಭಾಗಿಯಾಗಿರುವುದರಿಂದ ಒಂಟಿತನ ಕಾಡುವುದಿಲ್ಲ. ‘ರಾಮಾಚಾರಿ’ ತಂಡ ಕೂಡ ತುಂಬ ಬೆಂಬಲ ನೀಡುತ್ತಿದೆ. ಏನೇ ಇದ್ದರೂ ಜಾಗ್ರತೆಯನ್ನು ವಹಿಸುತ್ತಾರೆ. ನನಗೆ ಇರುವ ಗುರಿ ಏನೆಂದರೆ ಅಮ್ಮನ ಆಸೆಯನ್ನು ಪೂರೈಸಬೇಕು. ನಮ್ಮ ಕುಟುಂಬ ವರ್ಗದಲ್ಲಿ ಯಾರೂ ಕಲಾವಿದರು ಇಲ್ಲ. ನನ್ನ ಸ್ವಭಾವ ಹೇಗಿದೆ ಅಂದರೆ ನಾನೇನಾದರೂ ಒಂದು ನಿರ್ಧಾರ ತೆಗೆದುಕೊಂಡರೆ ಅದು ನೆರವೇರಿಸುವ ತನಕ ಬಿಡುವುದಿಲ್ಲ. ನಟನೆ ಎನ್ನುವುದು ನನ್ನ ಅಚಲ ವಿಶ್ವಾಸ. ಮುಂದೆ ಸಿನಿಮಾದಲ್ಲಿ ನಟಿಸುವ ಆಸೆ ಇದೆ. ಈಗಷ್ಟೇ ಹೆಜ್ಜೆ ಇಟ್ಟಿದ್ದೇನೆ ಇನ್ನೂ ಸಮಯ ಇದೆ.

■ **ರಾಘವೇಂದ್ರ ಕೆ.**